# ಬಂಧನದಿಂದ ಬಿಡುಗಡೆಯೆಡೆಗೆ

ಮುಕ್ತಿ, ಮೋಕ್ಷ, ಬಿಡುಗಡೆ ಈ ಪದಗಳು ಹೆಚ್ಚು ಕಡಿಮೆ ಒಂದೇ ಅರ್ಥದಲ್ಲಿ ಚಲಾವಣೆಯಾಗುತ್ತಿವೆ. ಭಾರತೀಯರಲ್ಲಿ ಎಲ್ಲಾ ಧರ್ಮಗಳು ಮಾನವನ ಬದುಕಿನ ಇಳಿಗಾಲದಲ್ಲಿ ಮುಕ್ತಿ ಪಡೆಯುವ ಬಗ್ಗೆಯೇ ತಲೆ ಕೆಡಿಸಿಕೊಂಡಂತೆ ತೋರುತ್ತವೆ. ಸುಖ– ಸಂತೋಷ, ಭೋಗ– ಭಾಗ್ಯ ಅನುಭವಿಸಿಯಾದ ಮೇಲೆ ಹರೆಯವೆಂಬ ಅವಸ್ಥೆ ಮಂಜಿನಂತೆ ಕರಗಿದ ಮೇಲೆ ಶಾಶ್ವತವಾದ ಸುಖ ಪಡೆಯುವುದು ಹೇಗೆ ಎಂಬ ಪ್ರಶ್ನೆ ಹುಟ್ಟಿಕೊಳ್ಳುತ್ತದೆ. ಇಲ್ಲಿ ಕಂಡು ಬರುವ ಸತ್ಯವೆಂದರೆ ಭಾಗ್ಯವಂತರಿಗೆ ಬರುವ ಎಲ್ಲಾ ಭೋಗ ಭಾಗ್ಯಗಳೂ ಕೊನೆಗೆ ನೆಲೆ ನಿಲ್ಲುವುದು ಮುಕ್ತಿಯ ಬಯಕೆಯಲ್ಲಿಯೇ.

ಬಿಡುಗಡೆಯ ಬಯಕೆ ಇದ್ದಕ್ಕಿದ್ದಂತೆ ಮೂಡುವ ತತ್‌ಕ್ಷಣದ ಭಾವವಲ್ಲ. ಬಿಡುಗಡೆಗಾಗಿ ನಿರಂತರ ತೊಳಲಾಟ ನಡೆಸಿದ ಪರಿಪಕ್ವ ಜೀವವೊಂದು ತನ್ನ ಪಯಣವನ್ನು ಒಂದು ಕಡೆ ನೆಲೆ ನಿಲ್ಲಿಸುವ ನಿರ್ಧಾರವೂ ಹೌದು. ಪಂಪನ ಆದಿಪುರಾಣದಲ್ಲಿ ಭರತ– ಬಾಹುಬಲಿಯ ಪ್ರಸಂಗ ವಿಶೇಷವಾದದ್ದು. ತನ್ನ ಆಯುಧಾಗಾರದಲ್ಲಿ ಚಕ್ರರತ್ನ ಹುಟ್ಟಿದ ತಕ್ಷಣ ಮಹತ್ವಾಕಾಂಕ್ಷಿಯಾದ ಭರತ ಭೂಮಂಡಲವನ್ನು ಜಯಿಸಿ ಚಕ್ರವರ್ತಿಯಾಗಲು ಹೊರಡುತ್ತಾನೆ. ಭೂಮಂಡಲವನ್ನು ಮಣಿಸಿದ ಚಕ್ರರತ್ನ ತನ್ನ ನಗರವನ್ನು ಪ್ರವೇಶಿಸದಿದ್ದಾಗ ತನ್ನ ತಮ್ಮಂದಿರಿಗೆ ಎರಗುವಂತೆ ಹೇಳಿ ಕಳುಹಿಸುತ್ತಾನೆ. ಸ್ವಾಭಿಮಾನಿಗಳಾದ ತಮ್ಮಂದಿರು ಎರಗುವಿಕೆಗೆ ಒಪ್ಪದೆ ರಾಜ್ಯ ತ್ಯಜಿಸಿ ತಂದೆಯ ಬಳಿ ದೀಕ್ಷೆ ಪಡೆಯುತ್ತಾರೆ. ಸ್ವಾಭಿಮಾನದ ಜೊತೆ ಪರಾಕ್ರಮಿಯೂ ಆದ ಬಾಹುಬಲಿ ಯುದ್ಧದ ವೀಳ್ಯವನ್ನು ಸ್ವೀಕರಿಸಿ ರಣರಂಗದಲ್ಲಿ ಭರತನನ್ನು ಎದುರಿಸುತ್ತಾನೆ. ಮೋಕ್ಷಗಾಮಿಯಾದ ಜೀವವೊಂದು ಹಾದುಬರುವ ಬದುಕಿನ ವರ್ಣರಂಜಿತ ಚಿತ್ರಣ ಇದಾಗಿದೆ. ಪಂಪನ ಯುದ್ಧ ವಿರೋಧಿ ನಿಲುವು ಜನ ಸಾಮಾನ್ಯರ ಪ್ರಾಣ ಹಾನಿಯನ್ನು ತಪ್ಪಿಸುವುದಲ್ಲದೆ ಜೀವಪರ ನಿಲುವನ್ನು ಎತ್ತಿ ಹಿಡಿಯುತ್ತದೆ. ಅದೃಷ್ಟವನ್ನು ನಂಬಿ ಯುದ್ಧ ಮಾಡುವ ಭರತ, ತನ್ನ ಸ್ವಸಾಮರ್ಥ್ಯವನ್ನು ನಂಬಿ ನಿಂತ ಬಾಹುಬಲಿ ಪಂಪ ಚಿತ್ರಿಸುವ ಎರಡು ಭಿನ್ನ ನೆಲೆಯ ವ್ಯಕ್ತಿತ್ವಗಳು. ಗೆಲ್ಲುವುದಕ್ಕೆ ಶಸ್ತ್ರಬಲ ಸಾಕೇ, ಆತ್ಮಬಲ ಬೇಡವೇ? ಎಂಬ ಪ್ರಶ್ನೆಯನ್ನು ಪಂಪ ಇಲ್ಲಿ ಎತ್ತುತ್ತಾನೆ.

ಚಂಚಲೆಯಾದ ರಾಜ್ಯಲಕ್ಷ್ಮಿಯನ್ನು ಬಾಹುಬಲಿ ಗೆದ್ದರೂ ಅವನ ಮನಸ್ಸು ಶಾಶ್ವತವಾದ ಸುಖವನ್ನು ಬಯಸಿ ತಪಸ್ಸಿಗೆ ಸಿದ್ಧವಾಗುತ್ತದೆ. ಲೌಕಿಕ ಬಂಧನಗಳಿಂದ ಬಿಡುಗಡೆ ಅಥವಾ ಮುಕ್ತಿ ಪಡೆಯಲು ತೀರ್ಮಾನಿಸುತ್ತಾನೆ. ಬಾಹುಬಲಿ ನಿಂತ ನಿಲುವು ಅವನ ಮುಖದ ಮೇಲಿನ ಮಂದಸ್ಮಿತ ಅವನ ನಿರ್ವಾಣದ ರೂಪು– ಏಕಕಾಲಕ್ಕೆ ಮೆಚ್ಚುಗೆ ಮತ್ತು ನಾವು ನಂಬಿದ ಬದುಕಿನ ಬಗ್ಗೆ ತಳಮಳ ಉಂಟು ಮಾಡುತ್ತದೆ. ಯಾವಾಗಲೂ ಗೆಲ್ಲಲೇಬೇಕು. ಸೋಲನ್ನು ಸಹಿಸಲಾಗದು ಎಂಬ ಮನೋಸ್ಥಿತಿಯು ಪರಸ್ಪರರಲ್ಲಿ ಮೇಲು– ಕೀಳು, ಸಹ್ಯ– ಅಸಹ್ಯ, ಸೋಲು– ಗೆಲುವುಗಳ ಬಗ್ಗೆ ಚಿಂತಿಸುವಂತೆ ಮಾಡುತ್ತದೆ.

ವಾಸ್ತವದಲ್ಲಿ ಕ್ಷುಲ್ಲಕ ಕಾರಣಕ್ಕಾಗಿ ನಡೆಯುವ ವೈಷಮ್ಯಗಳು, ಮನಸ್ತಾಪಗಳನ್ನು ನೋಡಿದಾಗ ಅವು ಅವಸಾನಗೊಳ್ಳುವ ಭೀಕರ ಸ್ಥಿತಿ ನೋಡಿದಾಗ ಇದಕ್ಕೆಲ್ಲಾ ಮಾನವನಲ್ಲಿರುವ 'ಅಹಂ' ಕಾರಣವಾಗಿದೆ ಎಂದು ಅರಿವಾಗುತ್ತದೆ. 'ಅಹಂ' ಅಡ್ಡಬಂದಾಗ ಅವನು ಸೋಲನ್ನು ಸ್ವೀಕರಿಸಲಾರ. ಮಾನವೀಯ ಸಂಬಂಧಗಳನ್ನು ಅರ್ಥಮಾಡಿಕೊಳ್ಳಲಾರ. ಗೆಲ್ಲಲೆಂದೇ ಹುಟ್ಟಿದವನು ಎಂಬ ಸ್ವಾರ್ಥ ಅಹಂಅನ್ನು ಅವನು ಕೊಂದುಕೊಳ್ಳದಿದ್ದರೆ ಮುಂದೊಂದು ದಿನ ಅದು ಅವನನ್ನೇ ಕೊಲ್ಲುತ್ತದೆ. ಅಹಂಅನ್ನು ತುಳಿದು ಬದುಕಬಲ್ಲವರು ನರಕದಲ್ಲಿಯೂ ನಾಕವನ್ನು ಸೃಷ್ಟಿಸಿಕೊಳ್ಳುತ್ತಾರೆ. ಸೋಲನ್ನು ಸರಸದಿಂದ ಎದುರಿಸಬಲ್ಲವನು ಸುಲಭವಾಗಿ ಯಾವುದೇ ಕೋಟಲೆಗಳಿಲ್ಲದೆ ಬದುಕಬಲ್ಲವನೂ ಆಗಿರುತ್ತಾನೆ. ಜೀವನದಲ್ಲಿ ಯಾವುದು ಶಾಶ್ವತ ಸುಖ, ಯಾವುದು ಶಾಶ್ವತವಲ್ಲದ್ದು ಎಂಬ ವಿವೇಚನೆ ಇಂತಹವರಲ್ಲಿ ಒಳಗೊಳಗೇ ಸುಳಿವು ತೋರದೆ ನಡೆಯುತ್ತಿರುತ್ತದೆ. ಇಂತಹವರು ಮಾತ್ರ ವ್ಯಾಮೋಹಗಳಿಂದ ಹೊರಬರಬಲ್ಲರು, ತಮ್ಮನ್ನು ತಾವು ಕಂಡುಕೊಳ್ಳಬಲ್ಲರು.

ತನ್ನನ್ನು ತಾನು ಅರಿಯುವ ಪ್ರಯತ್ನ, ಅರಿತಾದ ಮೇಲೆ ಬಂಧಿಸಿದ ಬಂಧನದಿಂದ ಹೊರಬರುವ ತಿಳಿವಳಿಕೆ ಬದುಕಿನ ಬಹುದೊಡ್ಡ ಜ್ಞಾನ. ಅದು ಅನುದಿನ ತನ್ನ ಅಂತರಂಗದೊಂದಿಗೆ ನಡೆಸುವ ಸಂವಾದವೂ ಹೌದು. ಆನು ಒಲಿದಂತೆ ಹಾಡುವೆ ಎಂಬ ನಿಲುವನ್ನು ಸ್ವೀಕರಿಸಿದ ವಚನಕಾರರು ಸತ್ಯದ ಮುಕ್ತಿಯ ಬಹುದೊಡ್ಡ ಶೋಧಕರು. ಅಂತರಂಗ ಬಹಿರಂಗದ ಬಿರುಕುಗಳನ್ನು ದಾಟುವ ಮೂಲಕವೇ ಅರಿವಿನ ಸಾಕ್ಷಾತ್ಕಾರ ನಡೆಸಿದವರು. ಬದುಕನ್ನೇ ಬಯಲಾಗಿಸಿಕೊಂಡ ಇವರು ಬಯಲಲ್ಲಿ ಆಲಯದ ಕಲ್ಪನೆ ಕಂಡವರು. ದೇಹವೇ ದೇಗುಲ, ಶಿರವೇ ಹೊನ್ನ ಕಳಸ ಎಂದು ಸಾರಿದವರು. ಸ್ಥಾವರವಾಗಿರುವ ದೈವದ ಕಲ್ಪನೆ ಧಿಕ್ಕರಿಸಿದವರು. ಜಂಗಮದ ಚೈತನ್ಯವನ್ನು ಒಪ್ಪಿಕೊಂಡವರು.

ವೈಶಾಖ ಶುದ್ಧ ಪೂರ್ಣಿಮೆಯ ದಿನ ಜ್ಞಾನೋದಯವನ್ನು ಪಡೆದ ಬುದ್ಧ ಮನುಷ್ಯರನ್ನು ಕಾಡುವ ಹಲವು ಸಮಸ್ಯೆಗಳಿಗೆ ಉಪವಾಸ, ತಪಸ್ಸುಗಳ ಮೂಲಕ ಉತ್ತರ ಹುಡುಕುವ ಪ್ರಯತ್ನ ಮಾಡುತ್ತಾರೆ. ಉಪವಾಸ, ದೇಹದಂಡನೆಯಿಂದ ಮುಕ್ತಿ ಅಥವಾ ಅರಿವು ಸಾಧ್ಯವಿಲ್ಲವೆಂದು ಅರಿತ ನಂತರ ಮತ್ತೆ ಎಂದಿನ ಜೀವನ ಆರಂಭಿಸುತ್ತಾರೆ. ದೇವರ ಅಸ್ತಿತ್ವದ ಬಗ್ಗೆ ಖಚಿತ ಅಭಿಪ್ರಾಯ ಹೊಂದಿದ್ದ ಬುದ್ಧ ತಾನು ದೇವರನ್ನು ಕಂಡಿಲ್ಲವೆಂದೇ ಹೇಳುತ್ತಾರೆ. ತಾನು ದೇವರ ಪುತ್ರನೆಂದೇ ಸಾರಿದ ಏಸುಕ್ರಿಸ್ತರ ಹೋರಾಟದ ಬದುಕು ಆರಂಭವಾದದ್ದೇ ತನ್ನ ಜನಸಮುದಾಯವನ್ನು ಗುಲಾಮಗಿರಿಯಿಂದ ಬಿಡುಗಡೆಯ ಕಡೆಗೆ ಕೊಂಡೊಯ್ಯುವುದರ ಮೂಲಕ.

ಬಿಡುಗಡೆಯೆಂಬುದು ತಾನೇ ಹೇರಿಕೊಂಡ ನಂಬಿಕೆಗಳಿಂದ 'ದಾಸ್ಯದಿಂದ ಕೀಳರಿಮೆಗಳಿಂದ ಹೊರಬರುವುದೇ ಆಗಿದೆ. ಈ ಬಂಧನಗಳು ಹೆಣ್ಣು– ಗಂಡು, ಬಡವ– ಬಲ್ಲಿದ, ಶ್ರೇಷ್ಠ– ಕನಿಷ್ಠ ಎಂಬ ತರತಮಗಳಿಂದ ಕೂಡಿದವೂ ಆಗಿವೆ. ಬುದ್ಧನ ನಗುವ ಅರೆಮುಚ್ಚಿದ ಕಣ್ಣು, ಬಾಹುಬಲಿಯ ಆಕಾಶದೆತ್ತರದ ನಿಲುವು ಇವೆಲ್ಲವೂ ನಮ್ಮ ಎದೆಯಾಳದಲ್ಲಿ ಕದಲುವ ಸಣ್ಣ ಸಣ್ಣ ಬೆಳಕಿನ ಅಲೆಗಳು.

■ **ಅಮೃತಮತಿ**

## ಮಾತೇ ಮುತ್ತು

★ ಹಣವನ್ನೇ ದೇವರೆಂದುಕೊಂಡರೆ, ಅದು ನಿಮ್ಮನ್ನು ದೆವ್ವದಂತೆ ಬೆನ್ನಟ್ಟುತ್ತದೆ.
–ಹೆನ್ರಿ ಫೀಲ್ಡಿಂಗ್

★ ಹಣ ಗಳಿಸುವುದರಲ್ಲೇ ತೊಡಗಿ ನನ್ನ ಸಮಯ ವ್ಯರ್ಥ ಮಾಡಬಯಸುವುದಿಲ್ಲ.
–ಜೀನ್ ಅಗಾಸಿಸ್

★ ಪ್ರಜಾಪ್ರಭುತ್ವವು ಪ್ರತಿಯೊಬ್ಬನಿಗೂ ತನ್ನನ್ನೇ ತಾನು ದಮನಿಸುವ ಹಕ್ಕನ್ನು ನೀಡುತ್ತದೆ.
–ಜೇಮ್ಸ್ ಲೋವೆಲ್

★ ಗಂಡಸಿಗೆ ಸಿಗರೇಟು ಕೊಡುವಷ್ಟೇ ಸಮಾಧಾನ, ಹೆಣ್ಣಿಗೆ ಕಣ್ಣೀರು ಕೊಡುತ್ತದೆ.
–ಎಡ್ವರ್ಡ್ ಲಿಟ್ಟನ್

★ ಗೆಳೆತನ ಎನ್ನುವುದು ಹಣದಂತೆ; ಗಳಿಸುವುದು ಸುಲಭ, ಇಟ್ಟುಕೊಳ್ಳುವುದು ಕಷ್ಟ.
–ಸ್ಯಾಮುವೆಲ್ ಬಟ್ಲರ್

★ ದ್ವೇಷವನ್ನು ಪ್ರೀತಿಯಿಂದ ಮಾತ್ರ ಗೆಲ್ಲಲು ಸಾಧ್ಯ.
–ಮಹಾತ್ಮ ಗಾಂಧಿ

★ ಮಕ್ಕಳು ಪೋಷಕರ ಭೂತಕಾಲವನ್ನು ನೋಡುತ್ತಾರೆ. ಪೋಷಕರು ಮಕ್ಕಳಲ್ಲಿ ತಮ್ಮ ಭವಿಷ್ಯವನ್ನು ಅರಸುತ್ತಾರೆ.
–ಜಾನ್ ರಸ್ಕಿನ್

★ ಜನರ ಸೇವೆ ಮಾಡೋದಕ್ಕೆ ಯಾವ ಕಾಲೇಜು ಡಿಗ್ರಿಯೂ ಬೇಕಾಗಿಲ್ಲ.
–ಮಾರ್ಟಿನ್ ಲೂಥರ್ ಕಿಂಗ್

★ ಭಗ್ನ ಪ್ರೇಮವು, ಜೀವನದಲ್ಲಿ ಶ್ರೇಷ್ಠ ಕೆಲಸವನ್ನು ಮಾಡಲು ಪ್ರೇರೇಪಿಸುತ್ತದೆ.
–ಜಾನ್ ಮಿಷೆಲ್

★ ಪ್ರೀತಿಯ ಸ್ಪರ್ಶವಾದರೂ ಸಾಕು, ಪ್ರತಿಯೊಬ್ಬರೂ ಕವಿಗಳಾಗುತ್ತಾರೆ.
–ಪ್ಲೆಟೋ

★ ಜಗಳ ಅಥವಾ ವ್ಯಾಜ್ಯ ದೀರ್ಘಕಾಲ ನಡೆದಿದೆ ಎಂದರೆ ಇಬ್ಬರದ್ದೂ ತಪ್ಪಿದೆ ಎಂದರ್ಥ.
–ವಾಲ್ಟೇರ್